# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 578 |
| ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ |
| ಉತ್ತರಿಸುವ ದಿನಾಂಕ | : | 10-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಪೌರಾಡಳಿತ ಇಲಾಖೆಯಲ್ಲಿ ಯೋಜನಾ ನಿರ್ದೇಶಕರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು/ಕಂದಾಯಾಧಿಕಾರಿಗಳ ವೃಂದದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳೆಷ್ಟು; ಎಷ್ಟು ಅವಧಿಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ; (ಹೆಸರುಗಳೊಂದಿಗೆ ಸಂಪೂರ್ಣ ವಿವರವಾದ ಮಾಹಿತಿ ನೀಡುವುದು) | ಪೌರಾಡಳಿತ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಯೋಜನಾ ನಿರ್ದೇಶಕರು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳು/ ಕಂದಾಯಾಧಿಕಾರಿಗಳ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆಗಳು ಕೆಳಕಂಡಂತಿವೆ<br>ಯೋಜನಾ ನಿರ್ದೇಶಕರು-01<br>ಪೌರಾಯುಕ್ತರು-(ಯಾರು ಇಲ್ಲ)<br>ಮುಖ್ಯಾಧಿಕಾರಿಗಳು-06<br>ಕಂದಾಯಾಧಿಕಾರಿಗಳು-02<br>**ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.** |
| ಆ. | 4 ರಿಂದ 5 ವರ್ಷಗಳಿಗೂ ಮೀರಿ ನಿಯೋಜನೆ ಮೇಲೆ ಮುಂದುವರೆದ ಅಧಿಕಾರಿಗಳೆಷ್ಟು; ಕಾರಣಗಳೊಂದಿಗೆ ಜಿಲ್ಲಾವಾರು, ಹುದ್ದೆವಾರು ವಿವರ ನೀಡುವುದು; | ಶ್ರೀ ಎಸ್.ಎಫ್ ನಂದಗಿರಿ, ಇವರೊಬ್ಬರು ಮಾತ್ರ ಇಲಾಖೆಯಲ್ಲಿ ನಿಯೋಜನೆ ಮೇರೆಗೆ 5 ವರ್ಷಗಳಿಗೂ ಮೀರಿ ಮುಂದುವರೆದಿರುತ್ತಾರೆ.<br>ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ ನಅಇ 25 ಟಿಎಂಇ 2019, ದಿನಾಂಕ 20-07-2019ರಲ್ಲಿ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿತ್ತು. ಸದರಿ ಆದೇಶವನ್ನು ಮಾನ್ಯ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ನ್ಯಾಯಾಲಯವು ವರ್ಗಾವಣೆ ಆದೇಶವನ್ನು ರದ್ದುಗೊಳಿಸಿ ನೀಡಿರುವ ತೀರ್ಪಿನನ್ವಯ ಮುಂದುವರೆದಿರುತ್ತಾರೆ. |
| ಇ. | 4 ರಿಂದ 5 ವರ್ಷಗಳಿಗೂ ಮೀರಿ ನಿಯೋಜನೆ ಮೇಲೆ ಮುಂದುವರೆಸಲು ನಿಯಮಗಳಲ್ಲಿ ಅವಕಾಶ ಇದೆಯೇ; ಇಲ್ಲದಿದ್ದಲ್ಲಿ, ಮುಂದುವರೆಸಲು ಕಾರಣಗಳೇನು? (ಮಾಹಿತಿ ನೀಡುವುದು) | ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958ರ ನಿಯಮ 50(3)ರನ್ವಯ ನಿಯೋಜನೆಯ ಗರಿಷ್ಠ ಅವಧಿ 5 ವರ್ಷಗಳಾಗಿದ್ದು, ಸರ್ಕಾರದ ವಿಶೇಷ ಆದೇಶಗಳ ಮೇರೆಗೆ ಹೆಚ್ಚಿನ ಅವಧಿಗೆ ವಿಸ್ತರಿಸಬಹುದಾಗಿದೆ. |

**ಸಂಖ್ಯೆ: ನಅಇ 08 ಎಲ್‌ಸಿಕ್ಯೂ 2020**

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

| ಅನುಬಂಧ | | | | |
|---|---|---|---|---|
| ಕ್ರ. ಸಂ. | ಮಹಾನಗರಪಾಲಿಕೆ/ಡಿಯುಡಿಸಿ/ನಗರ ಸ್ಥಳೀಯ ಸಂಸ್ಥೆ ಹೆಸರು | ಅಧಿಕಾರಿ/ನೌಕರರ ಹೆಸರು | ಅನ್ಯ ಇಲಾಖೆಯಾಗಿದ್ದಲ್ಲಿ ಮಾತ್ರ ಇಲಾಖೆಯ ಹೆಸರು | ಯಾವ ದಿನಾಂಕದಿಂದ ಕಾರ್ಯನಿರ್ವಹಣೆ |
| 1 | ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಜಿಲ್ಲೆ | ಎಸ್.ಎಫ್.ನಂದಗಿರಿ (ಯೋಜನಾ ನಿರ್ದೇಶಕರು) | ಕೆ.ಎಸ್.ಎಫ್.ಸಿ. | 06.06.2014 |
| 2 | ಪುರಸಭೆ ಮಾಲೂರು | ಶ್ರೀ.ಎಸ್.ಪ್ರಸಾದ್ (ಮುಖ್ಯಾಧಿಕಾರಿ) | ಸಾಂಖ್ಯಿಕ ಇಲಾಖೆ | 14.06.2019 |
| 3 | ಪುರಸಭೆ, ಕುಣಿಗಲ್ | ರಮೇಶ್ ಆರ್. (ಮುಖ್ಯಾಧಿಕಾರಿ) | Medical Education, Store keeper | 17.09.2018 |
| 4 | ಪಟ್ಟಣ ಪಂಚಾಯಿತಿ ವಿರಾಜಪೇಟೆ | ಶ್ರೀಧರ್ (ಮುಖ್ಯಾಧಿಕಾರಿ) | ಲೋಕೋಪಯೋಗಿ ಇಲಾಖೆ | 18.06.2019 |
| 5 | ಪುರಸಭೆ, ಕುಮಟಾ | ಶ್ರೀ ಸುರೇಶ ಎಂ. ಕೆ. (ಮುಖ್ಯಾಧಿಕಾರಿ) | ಉದ್ಯೋಗ ಮತ್ತು ತರಬೇತಿ ಇಲಾಖೆ | 22.08.2016 |
| 6 | ಪುರಸಭೆ, ಹರಪನಹಳ್ಳಿ | ಶ್ರೀ ನಾಗರಾಜ ನಾಯ್ಕ್.ಬಿ.ಆರ್ (ಮುಖ್ಯಾಧಿಕಾರಿ) | ಅರ್ಥಿಕ ಮತ್ತು ಸಾಂಖ್ಯಿಕ ಇಲಾಖೆ | 26.10.2018 |
| 7 | ಶಿವಮೊಗ್ಗ ಮಹಾನಗರಪಾಲಿಕೆ | ಶ್ರೀಮತಿ ಸುನಿತಾ (ಕಂದಾಯಾಧಿಕಾರಿ) | ಆರ್ಥಿಕ ಇಲಾಖೆ (ಸಚಿವಾಲಯ) | 14.02.2018 |
| 8 | ಶಿವಮೊಗ್ಗ ಮಹಾನಗರಪಾಲಿಕೆ | ಶ್ರೀ ಷಡಾಕ್ಷರಿ (ಕಂದಾಯಾಧಿಕಾರಿ) | ಕಂದಾಯ ಇಲಾಖೆ | 21.06.2019 |
| 9 | ಕಡೂರು ಪುರಸಭೆ | ಹೆಚ್.ಎನ್. ಮಂಜುನಾಥ, (ಮುಖ್ಯಾಧಿಕಾರಿ) | ಕೆ.ಎಸ್.ಎಫ್.ಸಿ | 15.09.2019 |